**<u>ದಿನಾಂಕಃ 18-07-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆಃ</u>**

ವಾದಿ ಪರ ವಕೀಲರು ಇಲ್ಲ ಎಂದು ಹೇಳಿರುತ್ತಾರೆ.

**<u>ಪಾಟೀ ಸವಾಲುಃ ಶ್ರೀ ಎನ್.ಎಸ್.ಬಿ. ವಕೀಲರಿಂದಃ 2 ಮತ್ತು 4 ನೇ ಪ್ರತಿವಾದಿ ಪರಃ</u>**

ನನ್ನ ಅಜ್ಜನ ಹೆಸರಿ ಹೇಮನಗೌಡ ಬಸನಗೌಡ ಪಾಟೀಲ. ಆತನ ಹೆಂಡತಿ ಹೆಸರು ಮರಡೆವ್ವ ಎಂದು ಇರತ್ತದೆ. ಅವರಿಗೆ ಬಸವನಗೌಡ ಮತ್ತು ಶಿವನಗೌಡ ಎಂದು 2 ಮಕ್ಕಳು. ಶಿವನಗೌಡ ನಮ್ಮ ತಂದೆ, ತಾಯಿ ಗೌರಮ್ಮ ಎಂದು ಇರುತ್ತದೆ. ಬಸವನಗೌಡ ಹೆಂಡತಿ ಹೆಸರು ಬಸವ್ವ ಎಂದು ಇರುತ್ತದೆ. ಅವರಿಗೆ ಹೇಮನಗೌಡ ಶಿದ್ದನಗೌಡ ಹಾಗೂ ಮಹಾದೇವಕ್ಕ ಎಂದು ಮೂರು ಜನ ಮಕ್ಕಳು. ಅವರಿಗೆ ಇವರನ್ನು ಬಿಟ್ಟು ಬೇರೆ ಯಾರು ವಾರಸುದಾರರು ಇರುವುದಿಲ್ಲ. ನಮ್ಮ ಅಜ್ಜ ಹೇಮನಗೌಡ 1933 ರಲ್ಲಿ ಮೃತಪಟ್ಟಿರುತ್ತಾರೆ. ನಮ್ಮ ದೊಡ್ಡಪ್ಪ ಬಸನಗೌಡ 1981 ರಲ್ಲಿ ಏಕಮಾತ್ರ ಘರಾಣೆದಲ್ಲಿ ಮೃತಪಟ್ಟಿರುತ್ತಾರೆ ನಮ್ಮ ದೊಡ್ಡವ್ವ ಬಸವ್ವ ಏಕಮಾತ್ರ ಘರಾಣೆದಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಾಯಿ ಗೌರವ್ವ ಸಹ ಏಕಮಾತ್ರ ಘರಾಣೆದಲ್ಲಿ ಮೃತಪಟ್ಟಿರುತ್ತಾರೆ. ನಮ್ಮ ತಂದೆ ಈ ವ್ಯಾಜ್ಯ ಮಾಡಿದ ನಂತರ ಮೃತಪಟ್ಟಿರುತ್ತಾರೆ. ದಾವಾ ಅನುಸೂಚಿತ ಬ 1 ರಿಂದ 3, 5 ರಿಂದ 14 ಹಾಗೂ ಪಂಚಾಯಿತಿ ಆಸ್ತಿ ಕ 1 ರಿಂದ 5 ಏಕಮಾತ್ರ ಘರಾಣೆದಿಂದ ಬಂದಂತಹ ಆಸ್ತಿಗಳು ಇರುತ್ತವೆ ಬ 4 ನೇ ಆಸ್ತಿ ಉಳಿದ ಆಸ್ತಿಗಳಿಂದ ಬಂದ ಆದಾಯದಿಂದ ಖರೀದಿಸಿದ ಆಸ್ತಿಗಳು ಇರುತ್ತದೆ. ನನ್ನ ಯಾವುದೇ ಕೆಲಸ ಮಾಡುತ್ತಿರಲಿಲ್ಲ. ಆಸ್ತಿಯ ಸಂಬಂಧ ಇಲ್ಲಿಯ ವರೆಗೆ ಯಾವುದೇ ಹಿಸ್ಸೆ ದಿಸ್ಸೆ ಆಗಿರುವುದಿಲ್ಲ. ಈ ದಾವೆ ಹಾಕುವ ಕಾಲಕ್ಕೆ ನಮ್ಮ ತಂದೆಗೆ 88 ವಯಾಸ್ಸಾಗಿತ್ತು. ಅವರು ಏನು ಮಾಡುತ್ತಿರಾ ಎಂದು ಅರಿವು ಇರುವುದಿಲ್ಲ. ಅವರಿಗೆ ಓಡಾಡುವ ಶಕ್ತಿ ಸಾಮರ್ಥ ಇರಲಿಲ್ಲ. 4 ಎಕರೆ ಜಮೀನಿನ ಬಗ್ಗೆ 5 ನೇ ಪ್ರತಿವಾದಿ

ನಮಗೆ ಗೊತ್ತಿಲ್ಲದ ಹಾಗೆ ಒಂದು ಖೊಟ್ಟಿ ದಾನ ಪತ್ರ ಮಾಡಿಸಿಕೊಂಡಿರುತ್ತಾರೆ ದಾವಾ ಆಸ್ತಿಯಲ್ಲಿ ನಮಗೆ ಅರ್ಧ ಭಾಗ ಪ್ರತಿವಾದಿ 2 ರಿಂದ 4 ಬರುತ್ತದೆ. 5 ನೇ ಪ್ರತಿವಾದಿಗೆ ಯಾವುದೇ ಹಕ್ಕು ಇರುವುದಿಲ್ಲ.

**ಪಾಟೀ ಸವಾಲುಃ 3 ಮತ್ತು 5 ನೇ ಪ್ರತಿವಾದಿ ಪರಃ**

ಕೋರಿಕೆ ಮೇರೆಗೆ ಮುಂದೂಡಲಾಗಿದೆ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).**

ಓ.ಹೇ.ಕೆ.ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.